ನಿಲಯದಲ್ಲಿ 1-2 ಲ್ಯಾಟ್ರಿನ್ ಮಾತ್ರ ಇದೆ. ಇದರಿಂದಾಗಿ ಶೌಚಾಲಯ ಇಲ್ಲದೇ ನೈರ್ಮಲ್ಯದ ಕೊರತೆಯಿಂದಾಗ ಸಾಕಷ್ಟು ಗೊಂದಲಗಳು ಕೂಡ ಅಲ್ಲಿ ನಿರ್ಮಾಣ ಆಗಿದೆ. ಆದರೆ ಈ ಬಗ್ಗೆ ಸರ್ಕಾರ ಶೌಚಾಲಯ ಮತ್ತು ಇತರ ಮೂಲ ಸೌಕರ್ಯದ ಬಗ್ಗೆ ಯಾವ ಕಾರ್ಯಕ್ರಮವನ್ನು ಹಾಕಿಕೊಂಡಿದೆ. ಎಷ್ಟು ಸಮಯದಲ್ಲಿ ಇದನ್ನು ಪೂರ್ತಿಗೊಳಿಸುತಾರೆ ಎಂಬುದನ್ನು ತಿಳಿಸಬೇಕೆಂದು ತಮ್ಮ ಮೂಲಕ ಕೇಳುತ್ತೇನೆ.

ಶ್ರೀ ಕೆ.ಎಂ. ಕೃಷ್ಣಾರೆಡ್ಡಿ:- ಮಾನ್ಯ ಅಧ್ಯಕ್ಷರೆ, ಪ್ರತಿ ವರ್ಷ ವಿದ್ಯಾರ್ಥಿ ನಿಲಯಗಳನ್ನು ಹೆಚ್ಚು ಮಾಡುತ್ತಾ ಇರುವುದರಿಂದ, ಖಾಸಗಿ ಕಟ್ಟಡಗಳಲ್ಲಿ ನಾವು ವಿದ್ಯಾರ್ಥಿ ನಿಲಯಗಳನ್ನು ನಡೆಸಬೇಕಾದಂತಹ ಪರಿಸ್ಥಿತಿ ಬಂದಿದೆ. ಖಾಸಗಿ ಕಟ್ಟಡಗಳಲ್ಲಿ ಶೌಚಾಲಯಗಳ ಕೊರತೆ ಇದೆ. ಅನೇಕ ಹಾಸ್ಟೆಲ್‌ಗಳಲ್ಲಿ ಕೊರತೆ ಇದೆ. ಮಾನ್ಯ ಸದಸ್ಯರು ಅವರ ಕ್ಷೇತ್ರಗಳಲ್ಲಿರತಕ್ಕ ಕೆಲವು ಖಾಸಗಿ ಕಟ್ಟಡಗಳಲ್ಲಿನ ವಿಚಾರ ಪ್ರಸ್ತಾಪ ಮಾಡಿದ್ದಾರೆ. ನಾವು ಬೇರೆ ಕಟ್ಟಡಗಳನ್ನು ತಕ್ಷಣ ತೆಗೆದುಕೊಳ್ಳುವುದಕ್ಕೆ ಸಿದ್ಧ ಇದ್ದೇವೆ. ಅದೇ ರೀತಿ ಶೌಚಾಲಯಗಳನ್ನು ಅದಷ್ಟು ಬೇಗ ಸರಿ ಮಾಡಲು ಪ್ರಯತ್ನ ಮಾಡುತ್ತೇವೆ.

ಶ್ರೀ ಎಸ್. ಅಂಗಾರ: ಕೇವಲ ಒಂದು ಎರಡು ಅಡಿಗೆ ಸಹಾಯಕರು ಇದ್ದಾರೆ. ಅದಷ್ಟು ತಕ್ಷಣ ಅಡಿಗೆ ಸಹಾಯಕರನ್ನು ಒದಗಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು: ಅಡಿಗೆ ಸಹಾಯಕರನ್ನು ಕೇಳುತ್ತಿದ್ದಾರೆ. ಮಾಡುತ್ತವೆಂದು ಹೇಳಿ.

ಶಿವಮೊಗ್ಗಕ್ಕೆ ಗಾಜನೂರಿನಿಂದ ನೀರು ನೇರ ಸರಬರಾಜು ಮಾಡುವುದು

96 (899) ಶ್ರೀ ಆಯನೂರು ಮಂಜುನಾಥ (ಹೊಸನಗರ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗ ನಗರದಲ್ಲಿರುವ ಜನಸಂಖ್ಯೆ ಎಷ್ಟು? ನಗರಸಭೆ ವ್ಯಾಪ್ತಿಯನ್ನು ವಿಸ್ತರಿಸಿದ್ದರಿಂದ ಹೆಚ್ಚಳವಾದ ಜನ ಸಂಖ್ಯೆ ಎಷ್ಟು?

ಆ) ಶಿವಮೊಗ್ಗ ನಗರದಲ್ಲಿ ಹಾಲಿ ಜಾರಿ ಇರುವ ಕುಡಿಯುವ ನೀರಿನ ಯೋಜನೆ ಯಾವ ಸಾಲಿನಲ್ಲಿ ಕೈಗೊಳ್ಳಲಾಗಿತ್ತು? ಎಷ್ಟು ಜನ ಸಂಖ್ಯೆಗೆ ಕುಡಿಯುವ ನೀರನ್ನು ಒದಗಿಸುವ ಬಗ್ಗೆ ಯೋಜಿಸಲಾಗಿತ್ತು?

ಇ) ಈಗ ಹಾಲಿ ಶಿವಮೊಗ್ಗದಲ್ಲಿ ಕುಡಿಯುವ ನೀರಿನ ಭೀಕರ ಸಮಸ್ಯೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಸರ್ಕಾರದವರು ಕೈಗೊಂಡ ಕ್ರಮಗಳೇನು?

ಈ) ಗಾಜನೂರಿನಿಂದ ಶಿವಮೊಗ್ಗಕ್ಕೆ ಕುಡಿಯುವ ನೀರು ಸರಬರಾಜು ಮಾಡುವ ಯೋಜನೆ ಯಾವಾಗ ಕೈಗೊಳ್ಳಲಾಗಿತ್ತು? ಆಗಿನ ಅದರ ಅಂದಾಜು ವೆಚ್ಚವೇನು?

ಉ) ಈ ಯೋಜನೆ ಈಗ ಯಾವ ಹಂತದಲ್ಲಿದೆ? ಈಗಿನ ಇದರ ಅಂದಾಜು ವೆಚ್ಚವೇನು? ಯಾವಾಗ ಪೂರ್ಣಗೊಳಿಸಲಾಗುವುದು?

ಬಿ.ಎನ್. ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು)

ಅ) ಶಿವಮೊಗ್ಗ ನಗರದ ಜನಸಂಖ್ಯೆ 1991 ಜನಗಣತಿ ಪ್ರಕಾರ 1,92,260 ಗಳಾಗಿರುತ್ತದೆ, ಹಾಗೂ ನಗರಸಭಾ ವ್ಯಾಪ್ತಿಯನ್ನು ವಿಸ್ತರಿಸಿದ್ದರಿಂದ 29,600 ಜನಸಂಖ್ಯೆ ಹೆಚ್ಚಳವಾಗಿರುತ್ತದೆ. ಆದ್ದರಿಂದ, ನಗರಸಭಾ ವ್ಯಾಪ್ತಿಗೆ ಬರುವ ಒಟ್ಟು ಜನಸಂಖ್ಯೆ 1991ರ ಜನಗಣತಿಯ ಪ್ರಕಾರ 2,21,860 ಆಗಿ ಹಾಲಿ ಜನಸಂಖ್ಯೆಯು 2.50 ಲಕ್ಷ ಇರುವುದು.

ಆ) ಶಿವಮೊಗ್ಗ ನಗರದಲ್ಲಿ ಹಾಲಿ ಚಾಲ್ತಿಯಲ್ಲಿರುವ ನೀರು ಸರಬರಾಜು ಯೋಜನೆಯನ್ನು 1975ನೇ ಇಸವಿಯಲ್ಲಿ ಚಾಲ್ತಿ ಮಾಡಲಾಯಿತು. ಈ ಯೋಜನೆಯನ್ನು 2000ನೇ ಇಸವಿಯಲ್ಲಿ ಊಹಿಸಲಾಗಿದ್ದ 1,50,000 ಜನಸಂಖ್ಯೆಯ ಆಧಾರದ ಮೇಲೆ 4.50 ದಶಲಕ್ಷ ಗ್ಯಾಲನ್ ಕುಡಿಯುವ ನೀರು ಸರಬರಾಜು ಮಾಡಲು ಯೋಜಿಸಲಾಗಿತ್ತು.

ಇ) ಬಂದಿದೆ. ಪ್ರಸ್ತುತ ಹೆಚ್ಚಳವಾಗಿರುವ ಹಾಗೂ 2011ನೇ ಇಸವಿಯಲ್ಲಿ ಆಗಬಹುದಾದ 3.00 ಲಕ್ಷ ಜನಸಂಖ್ಯೆಯನ್ನು ಆಧಾರವಾಗಿಟ್ಟುಕೊಂಡು ಸುಧಾರಿತ ನೀರು ಸರಬರಾಜು ಯೋಜನೆಯನ್ನು 1990 ರಲ್ಲಿ ರೂ. 500 ಲಕ್ಷಗಳಿಗೆ ಮಂಜೂರಾತಿ ಮಾಡಲಾಗಿದ್ದು ಸದರಿ ಯೋಜನೆಯು ಪ್ರಗತಿಯಲ್ಲಿದ್ದು ಯೋಜನೆಯನ್ನು 1997ರ ಏಪ್ರಿಲ್‌ನಲ್ಲಿ ಚಾಲ್ತಿ ಮಾಡಲು ಉದ್ದೇಶಿಸಲಾಗಿದೆ.

ಈ) ಗಾಜನೂರಿನಿಂದ ಶಿವಮೊಗ್ಗಕ್ಕೆ ಕುಡಿಯುವ ನೀರು ಸರಬರಾಜು ಮಾಡುವ ಯೋಜನೆ 500 ಲಕ್ಷ ರೂ. ಗಳಿಗೆ 1990ರ ಅಂತ್ಯದಲ್ಲಿ ಮಂಜೂರಾಗಿದ್ದು, ಯೋಜನೆಯ ಕಾರ್ಯವನ್ನು 1992ರಲ್ಲಿ ಪ್ರಾರಂಭಿಸಲಾಯಿತು.

ಉ) ಈ ಯೋಜನೆಯ ಮುಖ್ಯ ಕಾಮಗಾರಿಗಳಾದ ಮೂಲಸ್ಥಾವರದ ಕಾರ್ಯ, ಏರು ಕೊಳವೆ ಮಾರ್ಗ, ಜಲಸಂಗ್ರ ಹಾಗಾರದ ನಿರ್ಮಾಣದ ಕೆಲಸಗಳೂ ಪೂರ್ಣಗೊಂಡಿದೆ. 1000ಮೀ.ಮೀ. ವ್ಯಾಸದ ಪಿ.ಎಸ್.ಸಿ. ಗುರುತ್ವಾಕರ್ಷಕ ಕೊಳವೆ ಮಾರ್ಗದ 10205 ಮೀ. ಉದ್ದಲ್ಲಿ 8500 ಮೀ. ಉದ್ದದ ಕೆಲಸವೂ ಮುಗಿದಿದ್ದು ಉಳಿದ ಕೆಲಸ ಪ್ರಗತಿಯಲ್ಲಿದೆ.

ಜಲಶುದ್ಧೀಕರಣಾಗಾರದ ಕಾರ್ಯವೂ ಮುಗಿದಿದೆ. ಉಳಿದ ಕಾಮಗಾರಿಗಳೂ ವಿವಿಧ ಹಂತದಲ್ಲಿ ಪ್ರಗತಿಯಲ್ಲಿದೆ. ಈ ಯೋಜನೆಯ ಪರಿಷ್ಕೃತ ಅಂದಾಜು ವೆಚ್ಚ ರೂ. 1280.00 ಲಕ್ಷಗಳಾಗಿರುತ್ತದೆ. ಈ ಯೋಜನೆಯನ್ನು ಏಪ್ರಿಲ್ 1997ರಲ್ಲಿ ಚಾಲ್ತಿ ಮಾಡಿ, ನೀರನ್ನು ಒದಗಿಸಲು ಉದ್ದೇಶಿಸಲಾಗಿದೆ.

ಶ್ರೀ ಅಯನೂರು ಮಂಜುನಾಥ್: ಮಾನ್ಯ ಅಧ್ಯಕ್ಷರೆ, ಶಿವಮೊಗ್ಗ ನಗರದಲ್ಲಿ ಹೊಸ ವ್ಯಾಪ್ತಿಯಿಂದ ಕುಡಿಯುವ ನೀರಿನ ಸಮಸ್ಯೆ ಉದ್ಭವ ಆಗಿದೆ. ಇದಕ್ಕೆ ಎಷ್ಟು ಗ್ರಾಮಗಳು ಹೊಸದಾಗಿ ಸೇರ್ಪಡೆ ಆಗಿದ್ದಾವೆ. ಆ ಗ್ರಾಮಗಳಲ್ಲಿ ಇದುವರೆಗೂ ಕುಡಿಯುವ ನೀರಿನ ವ್ಯವಸ್ಥೆ ಆಗಿದೆಯೇ? ಆಗದೇ ಇದ್ದರೆ ಯಾವ ಕ್ರಮವನ್ನು ತೆಗೆದುಕೊಳ್ಳುತ್ತೀರಿ ಎಂಬ

ಮಾಹಿತಿಯನ್ನು ನೀಡಬೇಕು. ನಗರದಲ್ಲಿ 10 ಸಾವಿರ 20 ಸಾವಿರ ಜನಸಂಖ್ಯೆ ಜಾಸ್ತಿ ಆದರೆ ಎಲ್‌ಎ:20-2-97 (3ಎ) ಒಂದಿಷ್ಟು ನಲ್ಲಿಗಳ ಮೂಲಕ ನೀರು ಸರಬರಾಜು ಮಾಡಬಹುದು. ಆದರೆ ಗ್ರಾಮಗಳೇ ಆದಾಗ ಪ್ರತಿ ಒಂದು ಗ್ರಾಮದಲ್ಲಿ ನೀರನ ವ್ಯವಸ್ಥೆ ಮಾಡಬೇಕಾಗುತ್ತದೆ.

ಶ್ರೀ ಬಿ.ಎನ್. ಬಚ್ಚೇಗೌಡ: ಶಿವಮೊಗ್ಗದಲ್ಲಿ ಹಿಂದೆ ಜನಸಂಖ್ಯೆ ಇದ್ದಂತಹದ್ದು 1991ರ ಜನಗಣತಿ ಪ್ರಕಾರ ಒಂದು ಲಕ್ಷ 92 ಸಾವಿರ. ಆದಾದ ಮೇಲೆ ವಿಸ್ತೃತ ಜನಸಂಖ್ಯೆ ತಾವು ಕೇಳತಕ್ಕದ್ದು 30 ಸಾವಿರ ಅದಕ್ಕೆ ಸೇರಿದೆ. ಅಂದರೆ ಸುಮಾರು ಎರಡು ಎರಡೂವರೆ ಲಕ್ಷ ಅಲ್ಲಿ ಹಾಲಿ ಜನಸಂಖ್ಯೆ ಇದೆ.

ಶ್ರೀ ಆಯನೂರು ಮಂಜುನಾಥ್: 29,600 ಅಂದರೆ 30 ಸಾವಿರ ಜನಸಂಖ್ಯೆ ಹೆಚ್ಚಳ ಆಗಿದೆ. ಇದು ಗ್ರಾಮಾಂತರ ಪ್ರದೇಶದಿಂದ. ಒಂದೊಂದು ನಗರದಲ್ಲಿ 10 ಸಾವಿರ ಜನಸಂಖ್ಯೆ ಹೆಚ್ಚಾಗಿದ್ದರೆ ನೀವು ಒಂದು ನಲ್ಲಿ ಎರಡು ನಲ್ಲಿ ಕೊಟ್ಟರೆ ಸಂಭಾಳಿಸಬಹುದು. ಆದರೆ ಇಲ್ಲಿ ಬಂದಿರತಕ್ಕಂಥ ಸುಮಾರು 30, 40 ಗ್ರಾಮಗಳಿಗೆ ಕುಡಿಯುವ ನೀರಿನ ತೊಂದರೆ ಆಗಿದೆ. ಹಾಗಾಗಿ ನಗರಸಭೆ ವ್ಯಾಪ್ತಿಗೆ ಇವರನ್ನು ಸೇರಿಸಿಕೊಂಡು ಬಿಟ್ಟಿರಿ. 30, 40 ಗ್ರಾಮಗಳು ಹೊಸ ನಗರ ವಿಧಾನಸಭಾ ಕ್ಷೇತ್ರಕ್ಕೆ ಬರುತ್ತದೆ. ಸ್ವಲ್ಪ ಶಿವಮೊಗ್ಗ ಕ್ಷೇತ್ರಕ್ಕೆ ಬರುತ್ತದೆ. ಇಲ್ಲಿ ಕುಡಿಯುವ ನೀರಿನ ಪರಿಸ್ಥಿತಿ ಏನು? ಅವರಿಗೆ ಯಾವ ಯೋಜನೆಯನ್ನು ಇಟ್ಟುಕೊಂಡು ನಗರ ವ್ಯಾಪ್ತಿಯನ್ನು ವಿಸ್ತರಿಸಿದ್ದೀರಿ? ವಿಸ್ತರಿಸುವ ಮೊದಲು ಈ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿದ್ದೀರಾ ಎನ್ನುವಂತಹ ಮಾಹಿತಿ ಕೊಡುತ್ತೀರಾ?

ಶ್ರೀ ಬಿ ಎನ್ ಬಚ್ಚೇಗೌಡ: ಮಾನ್ಯ ಅಧ್ಯಕ್ಷರೆ, ಈ ಹಿಂದೆ ಇದ್ದಂತಹ ಇಡೀ ರಾಜ್ಯದಲ್ಲಿ ಮೊನ್ನೆ ಪುರಸಭೆ, ನಗರಸಭೆ ಹಾಗೂ ಮಹಾನಗರಪಾಲಿಕೆ ಚುನಾವಣೆಗಳು ಆದಾಗ, ಗಡಿ ಪ್ರದೇಶಗಳನ್ನು ಜಾಸ್ತಿ ಮಾಡಿ ವಿಸ್ತೃತ ಪ್ರದೇಶಗಳನ್ನು ಸೇರಿಸಿಕೊಂಡಿದ್ದೇವೆ. ಹಿಂದೆ ಅವು ಪಂಚಾಯತಿಗಳಲ್ಲಿ ಮತ್ತು ರೂರಲ್ ಡೆವಲಪ್‌ಮೆಂಟ್ ಇಲಾಖೆಯಲ್ಲಿಂದ ಬೋರ್‌ವೆಲ್ಸ್ ಹಾಕಿ ಅಲ್ಲಿ ನೀರು ಒದಗಿಸುವ ಕಾರ್ಯ ಮಾಡುತ್ತಿತ್ತು. ಈಗ ನಮ್ಮ ವ್ಯಾಪ್ತಿಗೆ ಬಂದ ಮೇಲೆ ವಿಶೇಷವಾಗಿ ತಮಗೂ ಗೊತ್ತಿದೆ. ಶಿವಮೊಗ್ಗದಲ್ಲಿ ಕುಡಿಯುವ ನೀರು ಸಾಕಷ್ಟು ಇಲ್ಲ. ಇದನ್ನು ಎರಡು ಸಾವಿರ ಇಸವಿ ಯೋಜನೆ ರೂಪಿಸಿ ಸುಮಾರು 4.5 ಮಿಲಿಯನ್ ಗ್ಯಾಲನ್ ನೀರನ್ನು ತುಂಗಾ ನದಿಯಿಂದ ತೆಗೆದುಕೊಳ್ಳುವಂತಹದು. ಈ ಯೋಜನೆ ಹಿಂದೆ ಆದಂತಹದು. ಈಗ ತುಂಗಾ ನದಿಯಿಂದ ನೀರು ತೆಗೆದುಕೊಳ್ಳುವಂತಹ ಎರಡನೇ ಹಂತ ಈಗಾಗಲೇ ಸುಮಾರು 6.5 ಎಂಜಿ ತೆಗೆದುಕೊಳ್ಳುವಂತಹ ಸುಮಾರು 90 ಭಾಗದಷ್ಟು ಕೆಲಸಗಳು ಆಗಿವೆ. ತಾವು ಹೇಳಿದ ಹಾಗೆ ಬಡಾವಣೆಗಳಿಗೆ ನೀರು ಕೊಡುವಂತಹದು. ಅದು ಸಾಕಷ್ಟು ಸಿಗುತ್ತಾ ಇಲ್ಲ ಎಂದು ಒಪ್ಪಿಕೊಂಡೆ. ಆದರೆ ಬಡಾವಣೆಗಳಿಗೂ ಕೊಡಬೇಕು ಎಂದು ಡಿಸ್ಟ್ರಿಬ್ಯೂಷನ್ ಸಿಸ್ಟಂ ಎಲ್ಲಾ ಮಾಡುವ ದೃಷ್ಟಿಯಿಂದ ಈಗಾಗಲೇ ಸುಮಾರು ಏಳು ಕೋಟಿ ರೂಪಾಯಿ ಖರ್ಚಾಗಿದೆ. ವಿಶೇಷ ಅನುದಾನ ಎಂದು ಹೇಳಿ ಹುಡ್ಕೋನಿಂದ ಐದೂವರೆ ಕೋಟಿ ನೆರವು ಪಡೆದುಕೊಂಡಿದ್ದೇವೆ. ಮಾನ್ಯ ಈಶ್ವರಪ್ಪನವರು ಬಂದಿದ್ದರು, ಮಾನ್ಯ ಶಂಕರ ಮೂರ್ತಿಯವರು ತಾವೆಲ್ಲಾ ಬಂದಿದ್ದೀರಿ. ಈಗ ಸಾಕಷ್ಟು ಕೆಲಸಗಳು ಆಗಿದೆ. ಓವರ್‌ಹೆಡ್ ಟ್ಯಾಂಕ್ ಕೆಲಸ ಆಗಿರತಕ್ಕದ್ದು ಮತ್ತು ಬೇರೆ ಬೇರೆ ರೀತಿಯಲ್ಲಿ ನೀರು ಕೊಡುವಂತಹ ಕಾರ್ಯ. ಮತ್ತು

ಹತ್ತುಕಿಲೋ ನೀರು ಬರುವಂತಹದು. ಗಾಜನೂರು ಡ್ಯಾಮಿನಿಂದ ನೀರು ತೆಗೆದುಕೊಳ್ಳುತ್ತಿದ್ದೇವೆ. ಮೊದಲು ನದಿಯಿಂದ ಮಾತ್ರ ತೆಗೆದುಕೊಳ್ಳುತ್ತಿದ್ದೆವು. ಅದು ಬೇಸಿಗೆ ಸಮಯದಲ್ಲಿ ನೀರು ಸಾಕಾಗುತ್ತಿರಲಿಲ್ಲ. ಆದ್ದರಿಂದ ಗಾಜನೂರು ಡ್ಯಾಮಿನಿಂದ ನೀರು ತೆಗೆದುಕೊಂಡರೆ 365 ದಿವಸವೂ ನೀರು ಸಿಗುವಂತಹ ವ್ಯವಸ್ಥೆಯಾಗುತ್ತದೆ. ಮತ್ತು ಈಗಾಗಲೇ ಮಿಶನರಿ ಪಡೆದಿದ್ದೇವೆ. ಮತ್ತೆ ಗುಡ್ಡದ ಮೇಲೆ, ಅಲ್ಲಿ ನೀರು ಸಂಗ್ರಹ ಮತ್ತು ಗ್ರಾವಿಟ್‌ನಲ್ಲಿ ಬರುವಂತಹ ವ್ಯವಸ್ಥೆ. ಫೀಡರ್ ಲೈನ್ಸ್ ಹಾಕುವಂತಹದು ಎಲ್ಲಾ ಮುಗಿದಿದೆ. ಏಪ್ರಿಲ್‌ಗೆ ಇದನ್ನು ಚಾಲೂ ಕೊಟ್ಟು ತಾವು ಹೇಳಿದ ಹಾಗೆ ಬಡಾವಣೆಗಳಿಗೆ ನೀರು ಕೊಡುವಂತಹ ಕಾರ್ಯ. ಅದಕ್ಕೆಲ್ಲಾ ಪೈಪ್ ಲೈನ್ ಸಿಸ್ಟಂ ಎಲ್ಲಾ ಹಾಕಿ ಇಂಪ್ರೂವ್ ಮಾಡಿ ನಾವು ಮಾಡುತ್ತೇವೆ.

ಶ್ರೀ ಆಯನೂರು ಮಂಜುನಾಥ್: ಗಾಜನೂರಿನಿಂದ ನೀರು ಬರುವಂತಹ ಯೋಜನೆಯನ್ನು ಯಾವಾಗ ಮುಗಿಸುತ್ತೀರಿ ಎಂಬ ಒಂದು ನಿಖರವಾದಂತಹ ದಿನಾಂಕ ಬೇಕು. ಕಳೆದ ನಾಲ್ಕೈದು ವರ್ಷಗಳಿಂದ ಯೋಜನೆ ನಡೆಯುತ್ತಿದೆ. ಎರಡನೆಯದು ಆಯೋಜನೆ ಜಾರಿ ಆಗುವವರೆಗೆ ಹೊಸದಾಗಿ ಸೇರ್ಪಡೆಯಾದಂತಹ ಗ್ರಾಮಗಳಿಗೆ ಬೋರ್‌ವೆಲ್ ಹಾಕುವಂತಹ ವ್ಯವಸ್ಥೆ ಆಗಬೇಕು. ಒಂದೊಂದು ಗ್ರಾಮಕ್ಕೆ ನಾಲ್ಕೈದು ಬೋರ್‌ವೆಲ್‌ಗಳನ್ನು ಕೊರೆದು ಈ ಬೇಸಿಗೆಯ ಸಮಸ್ಯೆಯನ್ನು ಬಗೆ ಹರಿಸುತ್ತೀರಾ?

ಶ್ರೀ ಬಿ.ಎನ್. ಬಚ್ಚೇಗೌಡ: ಈ ಯೋಜನೆಯ 90 ಭಾಗ ಮುಗಿದಿದೆ. ಇನ್ನು ಒಂದು ಓವರ್‌ಹೆಜ್ ಟ್ಯಾಂಕ್ ಮುಗಿಯುವ ಹಂತದಲ್ಲಿದೆ. ಟ್ರೀಟ್‌ಮೆಂಟ್ ಪ್ಲಾಂಟ್ ಈಗಾಗಲೇ ಮುಗಿದಿದೆ. ಮತ್ತು ಕಮಿಷನ್ ಸಹ ಆಗಿದೆ. ಫೀಡರ್ ಲೈನ್ಸ್ ಹಾಕಿದ್ದೇವೆ. ತಾವು ಕೇಳುವಂತಹದು ಯಾವಾಗ ಮುಗಿಯುತ್ತದೆ ಎಂದು ಕನಿಷ್ಟ ಸಮಯ ಹೇಳಿ ಎಂದರೆ ಏಪ್ರಿಲ್ 97ರಲ್ಲಿ ಸಂಪೂರ್ಣ ಯೋಜನೆಯನ್ನು ಚಾಲ್ತಿ ಮಾಡುತ್ತೇವೆ. ಮತ್ತು ತಾವು ಹೇಳಿದ ಹಾಗೆ ಏನಾದರೂ ನೀರಿನ ಹೊಸ ಪ್ರದೇಶದಲ್ಲಿದ್ದಾಗ ಬೋರ್‌ವೆಲ್ ಹಾಕಿ ನೀರು ಕೊಡುವಂತಹ ಕಾರ್ಯವನ್ನೂ ಮಾಡುತ್ತೇವೆ.

ಶ್ರೀ ಕೆ.ಎಸ್. ಈಶ್ವರಪ್ಪ: ಮಾನ್ಯ ಅಧ್ಯಕ್ಷರೆ, ಇದು 1990ನೇ ಇಸವಿಯಲ್ಲಿ ಪ್ರಾರಂಭ ಆಗಿ ಮೂರು ವರ್ಷಕ್ಕೆ ಮುಗಿಯುತ್ತದೆ ಎಂದು ಹೇಳಿದ್ದರು. ಇದು ಐದು ಕೋಟಿ ರೂಪಾಯಿ ಯೋಜನೆ. ಅದು 12 ಕೋಟಿ 80 ಲಕ್ಷಕ್ಕೆ ಯೋಜನೆ ಹೋಗಿದೆ.

ಅದರೆ ಇದಕ್ಕೆ ಇನ್ನೂ ಕ್ಯಾಬಿನೆಟ್ ಅಪ್ರೂವಲ್ ಏಕೆ ಕೊಟ್ಟಿಲ್ಲ ಎಂಬುದು ನನಗೆ ಅರ್ಥ ಆಗುತ್ತಿಲ್ಲ. ಕಳೆದ ಸುಮಾರು ನಾಲ್ಕು ತಿಂಗಳ ಕೆಳಗೆ ಶಿವಮೊಗ್ಗ ನಗರದ ನಗರಸಭಾ ಸದಸ್ಯರು, ನಾನೂ ಮಾನ್ಯ ಶಂಕರಮೂರ್ತಿಯವರೂ, ಮಾನ್ಯ ಆಯನೂರು ಮಂಜುನಾಥ್ ಅವರೂ ತಮ್ಮ ಹತ್ತಿರ ಭೇಟಿ ಮಾಡಿದಾಗ ಇನ್ನೊಂದು ವಾರದಲ್ಲಿ ಕ್ಯಾಬಿನೆಟ್ ಅಪ್ರೂವಲ್ ಮಾಡಿಸುತ್ತೇನೆಂದು ಹೇಳಿದ್ದೀರಿ. ಇವತ್ತಿನವರೆಗೂ ಅದು ಕ್ಯಾಬಿನೆಟ್ ಅಪ್ರೂವಲ್ ಆಗಿಲ್ಲ. ಸರ್ಕಾರದಿಂದ ಇದಕ್ಕೆ ಹಣ ಕೊಡುವ ಅವಶ್ಯಕತೆ ಸಧ್ಯಕ್ಕೆ ಬೇಕಾಗಿಲ್ಲ. ನಮ್ಮ ದುಡ್ಡು ಆದಕ್ಕೆ ಹಾಕಿ ಬಿಟ್ಟಿದ್ದೇವೆ. ನಗರಸಭೆ ಹಣ ಕೊಟ್ಟಿದ್ದೇವೆ, ನಗರಾಭಿವೃದ್ಧಿ ಹಣವೆಲ್ಲಾ ಕೊಟ್ಟಿದ್ದೇವೆ.

ಕರ್ನಾಟಕ ಅರ್ಬನ್ ವಾಟರ್ ಸಪ್ಲೈ ಹೆಸರಿನಲ್ಲಿ ಹಣ ಬ್ಯಾಂಕಿನಲ್ಲಿ ರೆಡಿ ಇದೆ. ಕ್ಯಾಬಿನೆಟ್ ಅಪ್ರೂವಲ್ ಏಕೆ ಕೊಡುತ್ತಿಲ್ಲ?

ಶ್ರೀ ಬಿ.ಎನ್. ಬಚ್ಚೇಗೌಡ: ಮಾನ್ಯ ಅಧ್ಯಕ್ಷರೆ, ಇದರಲ್ಲಿ ನಗರಸಭೆ 79 ಲಕ್ಷ ರೂ.ಗಳನ್ನು ಕೊಟ್ಟಿದೆ. 79 ಲಕ್ಷಗಳನ್ನು ರೂ. ಸಿಎಂಸಿ ಅವರ ಭಾಗ ಕೊಟ್ಟಿದ್ದಾರೆ. ಎಲ್‌ಐಸಿ ಲೋನ್ 72 ಲಕ್ಷ ರೂಪಾಯಿ ತೆಗೆದುಕೊಂಡಿದ್ದೇವೆ. ಅದರಲ್ಲಿ ಕರ್ನಾಟಕ ಹೌಸಿಂಗ್ ಬೋರ್ಡ್‌ನ ಕಾಂಟ್ರಿಬ್ಯೂಷನ್ 26 ಲಕ್ಷ ರೂಪಾಯಿಗಳು. 500 ಲಕ್ಷಕ್ಕೆ ಈ ಯೋಜನೆ ಇದ್ದದ್ದು. 1990ರಲ್ಲಿ ಮಂಜೂರಾತಿ 1992ರಲ್ಲಿ ಪ್ರಾರಂಭ ಆಯಿತು. ಈಗೆಲ್ಲಾ ಮಾಡಿಕೊಂಡು ಬಂದಿದ್ದೇವೆ. ಎಸ್ಕಲೇಷನ್ಸ್ ಎಲ್ಲಾ ಜಾಸ್ತಿ ಆಗಿ ಇದು ಸುಮಾರು 12 ಕೋಟಿ ರೂಪಾಯಿ ಆಗುತ್ತದೆ. ಅದರೂ ಸಹ ಇನ್ನೂ ಸ್ವಲ್ಪ ಕಡಿಮೆನೂ ಆಗುತ್ತದೆ. ಅದರಲ್ಲಿಯೇ ಮುಗಿಸುತ್ತೇವೆ. ಮತ್ತು ಎಸ್ಕಲೇಷನ್ ಪೋರ್ಷನ್ ವಿಚಾರ ನಮ್ಮ ಕ್ಯಾಬಿನೆಟ್ ಮುಂದೆ ಬರುತ್ತದೆ. 40 ಲಕ್ಷ ರೂಪಾಯಿ ಎಸ್ಕಲೇಷನ್ ಕ್ಲೈಮ್ ಕಂಟ್ರಾಕ್ಟರ್ಸ್‌ನವರದ್ದು. ಇಡೀ ರಾಜ್ಯದ್ದು ಐದು ಕೋಟಿ ರೂಪಾಯಿ ಎಸ್ಕಲೈಷನ್ ಕ್ಲೈಮ್ ಇದೆ. ಚಿಕ್ಕಣ್ಣಯ್ಯ ಸಮಿತಿಯು ಇದನ್ನು ಒಂದು ಸಾರಿಕೊಡಬೇಕೆಂದು ಹೇಳಿದೆ. ಅದರ ಬಗ್ಗೆ ಕ್ಯಾಬಿನೆಟ್ ಮುಂದೆ ಬಂದು ತೀರ್ಮಾನ ತೆಗೆದುಕೊಳ್ಳುತ್ತೇವೆ. ಆದ್ದರಿಂದ ಅಲ್ಪಸ್ವಲ್ಪ ಮಂದಗತಿಯಲ್ಲಿ ಕಂಟ್ರಾಕ್ಟರ್ಸ್ ಕೆಲಸ ಮಾಡುತ್ತಿದ್ದಾರೆಯೇ ವಿನಹ ಇದಕ್ಕೆ ದುಡ್ಡಿನ ಕೊರತೆ ಇಲ್ಲ. ಕೆಲಸ ಮಾಡಿ ಮುಗಿಸುತ್ತೇವೆ.

ಶ್ರೀ ಕೆ.ಎಸ್. ಈಶ್ವರಪ್ಪ: ಕ್ಯಾಬಿನೆಟ್ ಅಪ್ರೂವಲ್ ವಿಚಾರ ಹೇಳಲಿಲ್ಲ.

ಅಧ್ಯಕ್ಷರು: ಹೇಳಿದರು. ನೀವು ಹೇಳಿದ್ದಕ್ಕೂ ಅವರು ಹೇಳಿದರು. ನೀವು ಗಮನಿಸಿಕೊಳ್ಳಲಿಲ್ಲ. Infact I must compliment the Hon'ble Minister, ಬಹಳ ವಿವರವಾಗಿ ಉತ್ತರ ಕೊಡುತ್ತಾರೆ. ಎಸ್ಕಲೇಷನ್ 40 ಲಕ್ಷ ರೂಪಾಯಿಯದು ಇದೆ. ಆ ಎಸ್ಕಲೇಷನ್ ಎಲ್ಲಾ ಇದ್ದುದ್ದರಿಂದ we have to take a opinion. It is before the Cabinet. We are giving approval ಎಂದು ಹೇಳಿದರು.

ಶ್ರೀ ಕೆ.ಎಸ್. ಈಶ್ವರಪ್ಪ: ಕಳೆದ ಎಂಟು ತಿಂಗಳಿಂದ ಕ್ಯಾಬಿನೆಟ್ ಅಪ್ರೂವಲ್ ತೆಗೆದುಕೊಳ್ಳುತ್ತೇನೆ, ಎಂದು ಹೇಳುತ್ತಿದ್ದಾರೆ.

ಅಧ್ಯಕ್ಷರು: ನೀವು ಹೀಗೆ ಹೇಳುತ್ತೀರಿ. ಅವರು ಏಕಾ ಏಕಿ ಕ್ಯಾಬಿನೆಟ್ ಅಪ್ರೂವಲ್ ಕೊಡದೆ ಕಂಟ್ರಾಕ್ಟರಿಗೆ 40 ಲಕ್ಷ ರೂಪಾಯಿ ಎಸ್ಕಲೇಷನ್ ಏಕೆ ಕೊಟ್ಟಿದ್ದೀರಿ ಎಂತಲೂ ಹೇಳುತ್ತೀರಿ. ಇದರಲ್ಲಿ ಅವ್ಯವಹಾರ ನಡೆದಿದೆ ಎಂತಲೂ ಹೇಳುತ್ತೀರಿ.

ಶ್ರೀ ಕೆ.ಎಸ್. ಈಶ್ವರಪ್ಪ: ಸಾರ್ ನಿಮ್ಮ ಪಾಯಿಂಟ್ ನನಗೆ ಅರ್ಥ ಆಯಿತು.

ಅಧ್ಯಕ್ಷರು: ಮಾನ್ಯ ಈಶ್ವರಪ್ಪನವರೆ, When escalation is sought for by the contractor, the Government will have to exhaust all avenues, legitimate ways to find out and confirm whether the escalation is genuine,

reasonable and convincing ಎಂದು ಹೇಳಿ. ಆದ್ದರಿಂದ ಸ್ವಲ್ಪ ಸಮಯ ಆಗಿದೆ. ಈಗ ಅವರು ಹೇಳುತ್ತಿದ್ದಾರೆ, ಒನ್ ಟೈಮ್ ಅಫೈರ್ ಎಂದು ರೆಕ್ಟರಡೇಷನ್ ಬಂದಿದೆ, ಕೊಡುತ್ತಿದ್ದೇವೆ ಎಂದು ಹೇಳುತ್ತಿದ್ದಾರೆ.

ಶ್ರೀ ಕೆ.ಎಸ್. ಈಶ್ವರಪ್ಪ: ನನ್ನ ಪಾಯಿಂಟ್ ಆದಲ್ಲ. ಮಾನ್ಯ ಮುಖ್ಯಮಂತ್ರಿಗಳೇ ಇದರ ಬಗ್ಗೆ ಮೀಟಿಂಗ್ ಕರೆದಿದ್ದರು. ಸನ್ಮಾನ್ಯ ಬಚ್ಚೇಗೌಡರೂ ಇದಕ್ಕೆ ಬಂದಿದ್ದರು. ನಾವೆಲ್ಲಾ ಹೋಗಿದ್ದೆವು. ಅವತ್ತು ಮುಖ್ಯಮಂತ್ರಿಗಳು ಹಾಗೂ ಅಧಿಕಾರಿಗಳು ಬಂದಾಗ ಒಂದು ವಾರದಲ್ಲಿ ಕ್ಯಾಬಿನೆಟ್ ಅಪ್ರೂವಲ್ ಕೊಡುತ್ತೇವೆಂದು ಹೇಳಿ ಎಂಟು ತಿಂಗಳು ಆಯಿತು. ಅದು ನನ್ನ ಪ್ರಶ್ನೆ. ಮೊನ್ನೆ ನಗರಸಭಾ ಸಭೆ ಆಯಿತು. ನಗರಸಭೆ ಅಧಿವೇಶನದಲ್ಲಿ ಕೂಡ ಇದರ ಬಗ್ಗೆ ಚರ್ಚೆ ಆಯಿತು. ಇಡೀ ನಗರಸಭೆ ಪಕ್ಷ ಭೇದ ಮರೆತು ಎಲ್ಲರೂ ಕೂಡ ರೆಸಲ್ಯೂಷನ್ ಮಾಡಿ ಕಳುಹಿಸಿದ್ದೇವೆ. ಕ್ಯಾಬಿನೆಟ್ ಅಪ್ರೂವಲ್‌ಗೆ ಏಕೆ ಡಿಲೇ ಮಾಡುತ್ತಿದ್ದೀರಿ ಎಂದು ಕೇಳುತ್ತಿದ್ದೇನೆ.

ಅಧ್ಯಕ್ಷರು: ಪಕ್ಷ ಭೇದ ಮರೆತು ನೀವು ರೆಸಲ್ಯೂಷನ್ ಮಾಡಬಹುದು. ಒಂದೇ ಸಲ ಎಸ್ಕಲೇಷನ್ ಅನೌನ್ಸ್ ಮಾಡಿದರೆ ಅಡಿಟರ್ ಆಕ್ಷೇಪಣೆ ಮಾಡಬಹುದಲ್ಲಾ.

ಶ್ರೀ ಬಿ.ಎನ್. ಬಚ್ಚೇಗೌಡ: ಇದು ಫೈನಾನ್ಸ್ ಡಿಪಾರ್ಟ್‌ಮೆಂಟಿಗೆ ಹೋಗಿ ಪದೇ ಪದೇ ವಾಪಸ್ ಬಂದು ಅವರು ಎಸ್ಕಲೇಷನ್ ಕೊಡುವುದಕ್ಕೆ ಆಗುವುದಿಲ್ಲ. ಹೊಸದಾಗಿ ಟೆಂಡರ್ ಕರೆಯಿರಿ ಎಂದು ಹೇಳಿದಾಗ ನಾವು ಆರು ಕೋಟಿ ರೂಪಾಯಿ ಕೊಡುವುದು 33 ಕೋಟಿ ರೂಪಾಯಿ ಕೊಡಬೇಕಾಗುತ್ತದೆ ಎಂದು ಹೇಳಿ ಸಾಕಷ್ಟು ಸಮಜಾಯಿಷ್ಕಿ ಕೊಡುವಂತಹದು ಹಂತ ಹಂತವಾಗಿ ನಡೆದುಕೊಂಡು ಹೋಯಿತು.

ಶ್ರೀ ಕೆ.ಎಸ್. ಈಶ್ವರಪ್ಪ: ಇದು ಶಿವಮೊಗ್ಗ ನಗರದ ನೀರಿನ ಪ್ರಶ್ನೆ. ಅಧಿಕಾರಿಗಳು ಈಗಾಗಲೇ ಪೈಪ್ ಸಪ್ಲೈ ಮಾಡುವವರಿಗೆ ಹೇಳಿ ಪೈಪ್‌ಗಳನ್ನು ಸಪ್ಲೈ ಮಾಡಿಸಿದ್ದಾರೆ, ಆತ ಪೈಪ್‌ಗಳನ್ನು ಹಾಕಿದ್ದು ಎಸ್ಕಲೇಷನ್ ಕೊಟ್ಟಿಲ್ಲದಿರುವುದರಿಂದ ಉಳಿದ ಪೈಪ್‌ಗಳನ್ನು ಸಪ್ಲೈ ಮಾಡುವುದಿಲ್ಲವೆಂದು ಹೇಳುತ್ತಿದ್ದಾನೆ. ಈಗ ಏನು ಮಾಡಬೇಕು? ಪ್ರಶ್ನೆಯಿರುವುದು, ಇವರು ಎಸ್ಕಲೇಷನ್ ಕೊಡುವುದಿಲ್ಲವೆಂದು ಆತ ಉಳಿದ ಒಂದೂವರೆ ಕಿಲೋ ಮೀಟರ್‌ಗಳವರೆಗೆ ಪೈಪ್ ಹಾಕುವುದಕ್ಕಾಗುವುದಿಲ್ಲ.

ಅಧ್ಯಕ್ಷರು: ಕೊಡುತ್ತಿದ್ದೇವೆಂದು ಹೇಳಿದರಲ್ಲಾ. ಈಗ ಚಿಕ್ಕಣ್ಣಯ್ಯ ಎಕ್ಸ್‌ಪರ್ಟ್ ಕಮಿಟಿಯನ್ನು ಏನು ರಚಿಸಿದರು, ಆ ಸಮಿತಿಯವರೇ ಕೊಡಬಹುದೆಂದು ಶಿಫಾರಸ್ಸು ಮಾಡಿದ್ದಾರೆ. ಈ ವಿಷಯ ಕ್ಯಾಬಿನೆಟ್ ಮುಂದಿರುವುದರಿಂದ ಮಾಡಿಕೊಡುವುದಾಗಿ ಸಚಿವರು ಹೇಳಿದ್ದಾರೆ.

ಶ್ರೀ ಕೆ.ಎಸ್. ಈಶ್ವರಪ್ಪ: ಈ ವಾರದಲ್ಲಿ ಅಥವಾ ಹದಿನೈದು ದಿವಸದೊಳಗೆ ಇದಕ್ಕೆ ಕ್ಯಾಬಿನೆಟ್ ಅಪ್ರೂವಲ್ ತೆಗೆದುಕೊಳ್ಳುತ್ತೀರಾ?

ಶ್ರೀ ಬಿ.ಎಸ್. ಬಚ್ಚೇಗೌಡ: ಈ ವಿಷಯ ನಾಳೆ ಕ್ಯಾಬಿನೆಟ್ ಮುಂದೆ ಬರುತ್ತಿದೆ.

ಅಧ್ಯಕ್ಷರು: ಇದು ನಾಳೆ ಕ್ಯಾಬಿನೆಟ್ ಮುಂದೆ ಬರುತ್ತಿದೆಯೆಂದು ಹೇಳುತ್ತಿದ್ದಾರಲ್ಲಾ.

ಶ್ರೀ ಕೆ.ಎಸ್. ಈಶ್ವರಪ್ಪ: ಏಕೆಂದರೆ, ಪ್ರಧಾನಮಂತ್ರಿಗಳು ಪ್ರತಿ ವಾರವೂ ಹಾಸನಕ್ಕೆ ಹೋಗುತ್ತಾರೆ. ಆದರೆ, ನಮ್ಮ ಮುಖ್ಯಮಂತ್ರಿಗಳು ನಮ್ಮ ಜಿಲ್ಲೆಗೆ ಬರುವುದಿಲ್ಲ, ಬಂದರೂ ಒಂದೂ ಕೆಲಸ ಮಾಡಿಲ್ಲ, ಇದು ನಮ್ಮ ಸಮಸ್ಯೆ.

ಶ್ರೀ ಬಿ.ಎನ್. ಬಚ್ಚೇಗೌಡ: ಮಾನ್ಯ ಅಧ್ಯಕ್ಷರೆ, ಬಹಳ ಕೆಲಸ ಮಾಡಿದ್ದೇವೆ. ಆದರೂ ಅವರು they went to politicise this. We have done lot of Work. ರಾಜಕೀಯವಾಗಿ ಹೇಳುವುದಾದರೆ If you want to take advantage of this, ಮತ್ತೆ ಈಗ ಈ ರೀತಿ ಮಾತನಾಡುವುದಾದರೆ I am sorry.

Mr. Speaker: He is appreciative.

ಶ್ರೀ ಕೆ.ಎಸ್. ಈಶ್ವರಪ್ಪ: ನಗರಾಭಿವೃದ್ಧಿ ಸಚಿವರಾದ ಸನ್ಮಾನ್ಯ ಬಚ್ಚೇಗೌಡರು ಬಂದ ನಂತರ ಸಾಕಷ್ಟು ಕೆಲಸವಾಗಿರುವುದರಿಂದ, ಶಿವಮೊಗ್ಗ ನಗರ ಜನತೆಯ ಪರವಾಗಿ ಅವರನ್ನು ಅಭಿನಂದಿಸುತ್ತೇನೆ. ಆದರೂ ಇದಕ್ಕೆ ಈ ವಾರದಲ್ಲಿ, ಅಥವಾ ಇನ್ನು 15 ದಿವಸದೊಳಗೆ ಕ್ಯಾಬಿನೆಟ್ ಅಪ್ರೂವಲ್ ತೆಗೆದುಕೊಳ್ಳುತ್ತೀರಾ?

ಶ್ರೀ ಬಿ.ಎನ್. ಬಚ್ಚೇಗೌಡ: ಇದರ ಬಗ್ಗೆ ಕ್ರಮ ತೆಗೆದುಕೊಂಡು ಮಾಡುತ್ತೇವೆ.

ಅಧ್ಯಕ್ಷರು: ಮಾನ್ಯ ಜಿ.ವಿ. ಶ್ರೀರಾಮರೆಡ್ಡಿಯವರೇ, ತಮ್ಮ ಪ್ರಶ್ನೆಗೆ ಉತ್ತರಿಸಲು ಮಾನ್ಯ ಜವಳಿ ಸಚಿವರು ಸ್ವಲ್ಪ ಸಮಯಾವಕಾಶ ಕೇಳಿರುವುದರಿಂದ ದಯಮಾಡಿ ಸಹಕರಿಸಬೇಕು.

ಮೈಸೂರು ಬನ್ನಿ ಮಂಟಪದಲ್ಲಿ ನೀರಿನ ಟ್ಯಾಂಕ್ ನಿರ್ಮಾಣ

99(910) ಶ್ರೀ ಇ. ಮಾರುತಿರಾವ್ ಪವಾರ್(ನರಸಿಂಹರಾಜ):- ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಮೈಸೂರಿನ ಬನ್ನಿ ಮಂಟಪದಲ್ಲಿ ನೀರಿನ ಟ್ಯಾಂಕ್ ನಿರ್ಮಾಣದ ಕಾರ್ಯ ಪೂರ್ಣಗೊಂಡಿರುವುದೇ?

2. ಆಗದಿದ್ದಲ್ಲಿ ನಿರ್ಮಾಣ ಕಾರ್ಯ ವಿಳಂಬವಾಗಲು ಕಾರಣವೇನು? ವಿವರ ನೀಡಿ.

3. ಇದು ಯಾವಾಗ ಪೂರ್ಣಗೊಂಡು ಸಾರ್ವಜನಿಕ ಉಪಯೋಗಕ್ಕೆ ದೊರೆಯುವುದು.

ಬಿ.ಎನ್. ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು)

1. ಇಲ್ಲಾ

2. ಮೇಲಿನ ಕಾಮಗಾರಿಯನ್ನು ಪ್ರಾರಂಭಿಸಲು ಗುತ್ತಿಗೆದಾರರಿಗೆ ದಿನಾಂಕ:25-6-87 ರಂದು ಬೇಕಾದ ನಿವೇಶನವನ್ನು ವಹಿಸಿಕೊಡಲಾಗಿತ್ತು. ಗುತ್ತಿಗೆ ಕರಾರಿನ ಪ್ರಕಾರ